**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 76/2020**

**ಚಾ.ಸಾಃ 13, ಫ್ರಾ.ಸಾಃ 6**

| | |
|---|---|
| ಸಾಕ್ಷಿದಾರನ ಹೆಸರು | ಸಂದೀಪ ಶೇಟ್ |
| ತಂದೆಯ ಹೆಸರು | ಸುಧಾಕರ ಶೇಟ್ |
| ವಯಸ್ಸು | 34 ವರ್ಷಗಳು |
| ಉದ್ಯೋಗ | ಅಕ್ಕಸಾಲಿಗ |
| ವಾಸ್ತವ್ಯ | ಕುಮಟಾ |

**ಸಾಕ್ಷಿಯನ್ನು ದಿನಾಂಕಃ 20-07-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನನಗೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯವಿರುತ್ತದೆ. ಆರೋಪಿಗಳು ನನಗೆ ವಿನಾಯಕ ಎನ್ನುವವನ ಮುಖಾಂತರ ಪರಿಚಯವಾಗಿರುತ್ತಾರೆ. ಆರೋಪಿಗಳು ಒಂದು ಕರಿಮಣಿಸರ, ಉಂಗುರ, ನೆಕ್ಲೆಸ್ ಹೀಗೆ ಒಟ್ಟೂ 151.400 ಗ್ರಾಂ ನಷ್ಟು ಆಭರಣಗಳನ್ನು ನನಗೆ ತಂದುಕೊಟ್ಟು ತಮ್ಮ ತಂಗಿಯ ಮದುವೆ ಇದ್ದು ದುಡ್ಡು ಬೇಕು ಎಂದು ಹೇಳಿರುತ್ತಾರೆ. ನಾನು ಹಣ ಕೊಡುತ್ತೇನೆ ಎಂದು ಹೇಳಿರುತ್ತೇನೆ. ಎಷ್ಟು ಹಣ ನೀಡಿದ್ದೇನೆ ಎನ್ನುವುದು ನೆನಪಿಲ್ಲ. ಹಣವನ್ನು ತೆಗೆದುಕೊಂಡು ಪುನಃ ಬರುತ್ತೇನೆ ಎಂದು ಹೇಳಿರುತ್ತಾರೆ. ಆದರೆ ಅವರು ಮತ್ತೆ ಬಂದು ಬಂಗಾರವನ್ನು ಬಿಡಿಸಿಕೊಂಡಿಲ್ಲ.

ಪೋಲಿಸರು ಠಾಣೆಗೆ ಬರಲು ಹೇಳಿರುತ್ತಾರೆ. 05 ನೇ ತಾರೀಕು 2020 ನೇ ಸಾಲಿನಲ್ಲಿ ಬರಲು ಹೇಳಿರುತ್ತಾರೆ. ಆ ದಿನ ನಾನು ಠಾಣೆಗೆ ಬಂದಾಗ ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳಾದ ಮೊಬಸಿರ ಮತ್ತು ಇನ್ನೊಬ್ಬ ಠಾಣೆಯಲ್ಲಿ ಇದ್ದರು. ಆರೋಪಿಗಳಿಂದ ಬಂಗಾರವನ್ನು ಏಕೆ ತೆಗೆದುಕೊಂಡಿರಿ ಎಂದು ಪೋಲಿಸರು ನನ್ನನ್ನು ಕೇಳಿರುತ್ತಾರೆ. ಆರೋಪಿಗಳು ನನ್ನ ಸ್ನೇಹಿತನ ಮುಖಾಂತರ ಪರಿಚಯ ಇದ್ದದ್ದರಿಂದ ಮತ್ತು ಮದುವೆಗೆ ಹಣ ಬೇಕು ಎಂದು ಹೇಳಿದ್ದರಿಂದ ತೆಗೆದುಕೊಂಡಿರುವುದಾಗಿ ಹೇಳಿರುತ್ತೇನೆ. ಪೋಲಿಸರು ಬಂಗಾರದ ಆಭರಣಗಳನ್ನು ಠಾಣೆಗೆ ತರಲು ಹೇಳಿದ್ದರಿಂದ ನಾನು ಬಂಗಾರದ ಆಭರಣಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇನೆ. ಠಾಣೆಯಲ್ಲಿ ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಯಾರು ಯಾರು ಹಾಜರಿದ್ದರು ಎನ್ನುವುದು ಗೊತ್ತಿಲ್ಲ. ಆ ಸಂದರ್ಭದಲ್ಲಿ ಫೋಟೋ ತೆಗೆದಿರುತ್ತಾರೆ. ನಾನು 151 ಗ್ರಾಂ 400 ಮಿಲಿ ತೂಕದ ಬಂಗಾರದ ಆಭರಣಗಳನ್ನು ಹಾಜರು ಮಾಡಿರುತ್ತೇನೆ. ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಪಂಚನಾಮೆ ಮತ್ತು ಛಾಯಾಚಿತ್ರವನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-8 ಮತ್ತು 9 ಎಂದು ಗುರುತಿಸಲಾಗಿದ್ದು, ನಿಪಿ-8ರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಎಷ್ಟು ಆಭರಣಗಳನ್ನು ನೀಡಿದ್ದೇನೆ ಎನ್ನುವುದು ನೆನಪಿಲ್ಲ. ಆದ್ದರಿಂದ ಆಭರಣಗಳನ್ನು ಗುರುತಿಸಲಾಗುವುದಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ನಾನು ಠಾಣೆಯಲ್ಲಿ ಒಂದು ಕರಿಮಣಿಸರ, 2 ಚೈನುಗಳು, ಒಂದು ಜೊತೆ ಕಿವಿಯೋಲೆ, ಒಂದು ನೆಕ್ಲೇಸ್, ಒಂದು ನಾಣ್ಯ, ಒಂದು ಮುತ್ತಿನ ಸರ, ಹರಳು ಕುಡುಕು, ಮೇಗಾ, ಮಾಟಿ ಮತ್ತು ಪ್ಲೇಟು, 8 ಅಷ್ಟಪಟ್ಟಿ ಗುಂಡುಗಳು, ಒಂದು ಜೊತೆ ಕಿವಿಯೋಲೆ, ಒಂದು ದೊಡ್ಡ ಹರಳಿನ ಉಂಗುರ, ಒಂದು ಸಣ್ಣ ಹರಳಿನ ಉಂಗುರ, ಒಂದು ಮಂಗಳಸೂತ್ರ, 2 ಪವನಗಳು, ಒಂದು ಜೊತೆ ಕಿವಿಯೋಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಂಗಾರದ ಆಭರಣಗಳನ್ನು ಚಾಸಾ-1ರವರ ಮಧ್ಯಂತರ ಸ್ವಾಧೀನಕ್ಕೆ ನೀಡಿದ್ದು ಆ ಸಂದರ್ಭದಲ್ಲಿ ತೆಗೆಸಿರುವ ಛಾಯಾಚಿತ್ರದಲ್ಲಿರುವ ಆಭರಣಗಳನ್ನು ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಾನು ಕಳೆದ 10 ವರ್ಷಗಳಿಂದ ಬಂಗಾರದ ಅಂಗಡಿಯನ್ನು ನಡೆಸುತ್ತಿದ್ದೇನೆ. ನಾನು ಬಂಗಾರದ ಆಭರಣಗಳನ್ನು ತಯಾರಿಸಿಕೊಟ್ಟ ಬಗ್ಗೆ ಹಾಗೂ ಬಂಗಾರದ ಆಭರಣಗಳನ್ನು ಅಡವಿಟ್ಟಬಗ್ಗೆ ರಸೀದಿಯನ್ನು ನೀಡುತ್ತೇನೆ. ಅದರ ನಕಲು ಪ್ರತಿಯನ್ನು ನಾನು ಇಟ್ಟುಕೊಳ್ಳುತ್ತೇನೆ.

"ಮುಬಾಸಿರ್ ತಂದೆ ಕುತುಬುದ್ದೀನ್‌ನು ನನಗೆ ಕಳೆದ ಒಂದುವರೆ ವರ್ಷಗಳಿಂದ ನನ್ನ ಬಳಿ ಬಂಗಾರದ ಆಭರಣಗಳನ್ನು ಖರೀದಿಸಿದ್ದರಿಂದ ಆತನ ಪರಿಚಯು ನನಗೆ ಇರುತ್ತದೆ" ಎಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನೀಡಿದ್ದಾನೆ ಎಂದು ಹೇಳುವ ಹೇಳಿಕೆಯ ಸದರಿ ಭಾಗವನ್ನು ಆರೋಪಿ ಪರ ವಕೀಲರು ಸಾಕ್ಷಿಗೆ ಓದಿ ಹೇಳಿದ್ದು ಸಾಕ್ಷಿ ಅದನ್ನು ನಿರಾಕರಿಸಿದ್ದರಿಂದ ಸಾಕ್ಷಿ ನೀಡಿದ್ದಾನೆ ಎಂದು ಹೇಳುವ ಹೇಳಿಕೆಯನ್ನು ನಿಡಿ-1 ಮತ್ತು ಹೇಳಿಕೆಯ ಸದರಿ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

1 ನೇ ಆರೋಪಿ ನನ್ನ ಬಳಿ ಅಡವಿಟ್ಟಿದ್ದ ಎನ್ನುವ ಆಭರಣಗಳಿಗೆ ಸಂಬಂಧಿಸಿದಂತೆ ನಾನು ಆತನಿಗೆ ಯಾವುದೇ ರಸೀದಿಯನ್ನು ನೀಡಿರುವುದಿಲ್ಲ. 1 ನೇ ಆರೋಪಿ ನೀಡಿದ್ದ ಎನ್ನುವ ಆಭರಣಗಳ ತೂಕದ ಬಗ್ಗೆ ಒಂದು ಕೈಚೀಟಿಯನ್ನು ನೀಡಿದ್ದೆ. ಆರೋಪಿಗೆ ಎಷ್ಟು ಹಣ ನೀಡಿದ್ದೆ ಎನ್ನುವುದು ನೆನಪಿಲ್ಲ. 1 ನೇ

**ಚಾ.ಸಾಃ 13, ಪ್ರಾ.ಸಾಃ 6**

ಆರೋಪಿ ನನ್ನ ಅಂಗಡಿಗೆ ಬಂದಿಲ್ಲ ಮತ್ತು ಯಾವುದೇ ಆಭರಣಗಳನ್ನು ನನ್ನ ಬಳಿ ಅಡವಿಟ್ಟಿರಲಿಲ್ಲ ಮತ್ತು ನಾನು ಆತನಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

ಪೋಲಿಸರು ನನ್ನ ಅಂಗಡಿಗೆ ಬಂದು ಠಾಣೆಗೆ ಬರಲು ಹೇಳಿದ್ದರು. ನಾನು ಪೋಲಿಸರ ಮುಂದೆ ಯಾವುದೇ ಆಭರಣಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಆಭರಣದ ತೂಕ ಎಷ್ಟು ಎಷ್ಟು ಇತ್ತು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಲಾಗುವುದಿಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**